ವಿದ್ಯುತ್ ಸ್ಥಾವರದಲ್ಲಿ ಸ್ವಲ್ಪ ತೊಂದರೆ ಇರುವುದರಿಂದ ವಿದ್ಯುತ್ ಲಭ್ಯತೆ ಸ್ವಲ್ಪ ಕಡಿಮೆ ಇದೆ. ಈಗ ಪರಿಸ್ಥಿತಿ ಸುಧಾರಣೆಯಾಗುತ್ತಿದೆ. ಈಗ 180 ಮೆ.ವ್ಯಾ. ವಿದ್ಯುತ್‌ನ್ನು ಒದಗಿಸುವ ಬಗ್ಗೆ ಅವರು ಏನು ಪ್ರಸ್ತಾಪ ಮಾಡಿದ್ದಾರೆ, ಆ ವಿದ್ಯುತ್‌ಅನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಊ) ವಿಷಯ: ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ಸಾವಳಗಿ ಭಾಗ ಮತ್ತು ಬಿಜಾಪುರ ಜಿಲ್ಲೆ ಬಬಲೇಶ್ವರ ವಿಭಾಗದ ಗ್ರಾಮಗಳಿಗೆ ಕೃಷ್ಣಾ ನದಿಯ ಉಳಿಕೆಯ 23 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ : ಮಾನ್ಯ ಅಧ್ಯಕ್ಷರೆ, ಕೃಷ್ಣಾನದಿಯ ಹಿನ್ನೀರಿನಿಂದ ನೀರಿನ ಸೌಲಭ್ಯದಿಂದ ವಂಚಿತರಾದಂಥ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸಾವಳಗಿ ಭಾಗ ಹಾಗೂ ಬಿಜಾಪುರ ಜಿಲ್ಲೆಯ ಬಬಲೇಶ್ವರ ಗ್ರಾಮದ ಭಾಗಗಳಿಗೆ ನೀರಾವರಿ ಉದ್ದೇಶಕ್ಕಾಗಿ ಈಗಾಗಲೇ ಉಳಿಕೆಯಾದ 23 ಟಿ.ಎಂ.ಸಿ. ನೀರನ್ನು ಉಪಯೋಗಿಸುವ ದೃಷ್ಟಿಯಿಂದ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: (ಜಲ ಸಂಪನ್ಮೂಲ ಸಚಿವರು) : ಮಾನ್ಯ ಅಧ್ಯಕ್ಷರೆ, ಆಂಧ್ರ ಪ್ರದೇಶ ರಾಜ್ಯದ ಪೊಲ್ಲಾವರಂ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ನೀಡಿರುವುದರಿಂದ ಕರ್ನಾಟಕವು 23 ಟಿ.ಎಂ.ಸಿ. ನೀರನ್ನು ಕೃಷ್ಣಾ ಕಣಿವೆಯಲ್ಲಿ ಉಪಯೋಗಿಸಿಕೊಳ್ಳಬಹುದಾಗಿದ್ದು, ಈ 23 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡುವ ಸಲುವಾಗಿ ದಿನಾಂಕ 20-01-2010 ರಂದು

ಶ್ರೀ ಡಿ.ಎನ್. ದೇಸಾಯಿ, ಪ್ರಧಾನ ಸಲಹೆಗಾರರು, ಜಲಸಂಪನ್ಮೂಲ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಸಮಿತಿಯು ಹಲವಾರು ಸಭೆಗಳನ್ನು ನಡೆಸಿದ್ದು, ವಿವಿಧ ಯೋಜನೆಗಳಿಗೆ ನೀರನ್ನು ಹಂಚಿಕೆ ಮಾಡಬೇಕಾಗಿದೆ. ಬಬಲೇಶ್ವರ ಮತ್ತು ತುಬಚಿ ಏತ ನೀರಾವರಿ ಯೋಜನೆಗಳನ್ನು ಈ ಹಂಚಿಕೆಯಲ್ಲಿ ಪರಿಗಣಿಸಬೇಕೆಂದು ಸೂಚಿಸಲಾಗಿದೆ. ಸಮಿತಿಯ ಅಂತಿಮ ವರದಿ ಬಂದ ನಂತರ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.

ಶ್ರೀ ಶ್ರೀಕಾಂತ್ ಕುಲಕರ್ಣಿ: ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ನಾನು ವಿನಂತಿಯನ್ನು ಮಾಡುವುದೇನೆಂದರೆ, ಈ ಸಾವಳಗಿ ಮತ್ತು ಬಬಲೇಶ್ವರ ಭಾಗಗಳಿಗೆ ಮುಳವಾಡ ಏತನೀರಾವರಿಯಿಂದ ನೀರಾವರಿ ಬರುತ್ತದೆಂದು ಸರ್ಕಾರ ಸರ್ವೆ ಮಾಡಿ ಗುರುತು ಕೂಡ ಹಾಕಿದ್ದು ಇದೆ. ಅದೇ ರೀತಿ ಹಿಪ್ಪರಗಿ ಜಲಾಶಯ ಮುಗಿದ ನಂತರ ಅಲ್ಲಿಂದ ಕೂಡ ಲಿಫ್ಟ್ ಇರಿಗೇಶನ್ ಮೂಲಕ ಈ ಭಾಗಕ್ಕೆ ನೀರು ಬರುತ್ತದೆ ಎಂದು ಸರ್ವೆ ಕಾರ್ಯವಾಗಿತ್ತು. ಆ ಎರಡು ಯೋಜನೆಯಿಂದ ಈ ಭಾಗಕ್ಕೆ ನೀರು ಬಂದಿರುವುದಿಲ್ಲ. ಬರಪೀಡಿತ ಪ್ರದೇಶವಾಗಿರುವುದರಿಂದ ರೈತರು ಕೇವಲ ಮಳೆಯನ್ನು ನಂಬಿ ಇವತ್ತು ಕೃಷಿ ಮಾಡತಕ್ಕಂಥ ಒಂದು ವ್ಯವಸ್ಥೆ ಇದೆ. ಮಾನ್ಯ ಮಂತ್ರಿಗಳು ಇವತ್ತು ಕೊಟ್ಟಿರುವ ಉತ್ತರದಿಂದ ನನಗೆ ಸಮಾಧಾನವಾಗಿದೆ. ಆದರೆ ಈ ಭಾಗದಲ್ಲಿ ಎರಡು ಯೋಜನೆಗಳಿಗೆ ಕನಿಷ್ಟ ಒಂದು ಯೋಜನೆಗೆ 2 ಟಿ.ಎಂ.ಸಿ ನೀರನ್ನು ಇಡಬೇಕು. ಆ ನೀರನ್ನು ಲಿಫ್ಟ್ ಮೂಲಕ ಅಲ್ಲಿಗೆ ಒದಗಿಸಿ ಕೊಟ್ಟರೆ ಆ ಬರಪೀಡಿತ ಪ್ರದೇಶದ ಜನರಿಗೆ ಏನಾದರೊಂದು ವ್ಯವಸ್ಥೆಯನ್ನು ಮಾಡಿದಂತಾಗುತ್ತದೆ. ಸಾವಳಗಿ ಹತ್ತಿರ ಕಣ್ಣೊಳ್ಳಿ ಎಂಬ ಕೆರೆ ಇದೆ. ಆ

ಜಲಾಶಯದಿಂದ ನೀರನ್ನು ಈ ಕೆರೆಗೆ ಬಿಟ್ಟು ಅಲ್ಲಿಂದ ನೀರನ್ನು ಲಿಫ್ಟ್ ಮಾಡಿದರೆ, ಗೋತೆ, ಕಲಬೀಳಗಿ, ಕಾಜೀಬಿಳಗಿ, ಕುರಗೋಡು ಎಂಬ ನಾಲ್ಕು ಗ್ರಾಮಗಳ ಸ್ವಲ್ಪ ಎತ್ತರದಲ್ಲಿರುವ ಜಮೀನುಗಳಿಗೆ ನೀರಾವರಿ ಮಾಡಲಿಕ್ಕೆ ಸಾಧ್ಯವಿದೆ. ಇದರ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ ಸನ್ಮಾನ್ಯ ಮಂತ್ರಿಗಳು ತಕ್ಷಣ ಒಂದು D.P.R. ತರಿಸಿಕೊಂಡು ಆ ಯೋಜನೆಯನ್ನು ಆದಷ್ಟು ಬೇಗನೆ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಅವರನ್ನು ನಾನು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಸನ್ಮಾನ್ಯ ಅಧ್ಯಕ್ಷರೆ ಈ ಪ್ರದೇಶವು ಎರಡು ಯೋಜನೆಯಿಂದ ವಂಚಿತವಾಗಿರುವುದು ಮತ್ತು ನಾನೇ ಖುದ್ದಾಗಿ ಅಲ್ಲಿಗೆ ಹೋಗಿ ಆ ಪರಿಸ್ಥಿತಿಯನ್ನು ನೋಡಿದ್ದೇನೆ. ಆದ್ದರಿಂದಲೇ 23 ಟಿ.ಎಂ.ಸಿ ನೀರನ್ನು ಹಂಚಿಕೆ ಮಾಡಲಿಕ್ಕೆ ಪರಿಗಣಿಸಬೇಕೆಂದು ಈಗಾಗಲೇ ಸೂಚನೆ ಮಾಡಿದ್ದೇವೆ. ಆ ಸಮಿತಿ ವರದಿ ಬಂದ ನಂತರ ಅದನ್ನು ಪರಿಗಣಿಸಿ ಸೂಕ್ತ ಕ್ರಮವನ್ನು ಜರುಗಿಸಲಾಗುತ್ತದೆ.

ಊ) ವಿಷಯ: ಮುದ್ದೇಬಿಹಾಳ ತಾಲ್ಲೂಕಿನ ದನ್ನೂರು–ತಂಗಡಗಿ ಮಾರ್ಗವಾಗಿ ಬರುವ ಹಳ್ಳಿಗಳಿಗೆ ಕೃಷ್ಣಾ ನದಿಯಿಂದ ಕುಡಿಯುವನೀರು ಯೋಜನೆ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ.

ಪಿ.ಎಸ್. ನಾಡಗೌಡ: ಮುದ್ದೇಬಿಹಾಳ ತಾಲ್ಲೂಕಿನ ದನ್ನೂರು–ಮುದ್ದೇಬಿಹಾಳ ತಾಲ್ಲೂಕಿನ ದನ್ನೂರು–ತಂಗಡಗಿ ಮಾರ್ಗವಾಗಿ ಬರುವ ಗುಂಪು ಹಳ್ಳಿಗಳಿಗೆ ಕಳೆದ ಆರು ವರ್ಷಗಳ ಹಿಂದೆ ಪ್ರಾರಂಭವಾದ ಕೃಷ್ಣಾ ನದಿಯಿಂದ ಕುಡಿಯುವ ನೀರಿನ ಯೋಜನೆಯ